ESTABLISHMENT OF A HEALTH UNIT AT PALYA HOBLI

578. Sri K. M. RUDRAPPA (Sakleshpur).—

Will the Minister for Health be pleased to state :—

(*a*) whether the Government is aware of the fact that there is not a single health unit for Palya Hobli of Alur Taluk;

(*b*) whether there have been representations from the public and local bodies for the establishment of a Health Unit at Palya (Headquarters of Palya Hobli) of Alur Taluk;

(*c*) whether the Government is aware that Palya is a Malnad region;

(*d*) the steps taken by Government to establish a Health Unit at Palya ?

Sri H. SIDDAVEERAPPA (Minister for Health).—

(*a*) Yes.

(*b*) No.

(*c*) It is a semi-Malnad area.

(*d*) Does not arise.

ಶ್ರೀ ಕೆ. ಎಂ. ರುದ್ರಪ್ಪ.—ಪಾಳ್ಯದಲ್ಲಿ ಹೆಲ್ತ್ ಯೂನಿಟ್ನ್ನು ಕೊಡುವುದರ ಬಗ್ಗೆ ಜನಪ್ರತಿನಿಧಿಗಳು ಬಂದಿಲ್ಲ ಎಂದು ಹೇಳುತ್ತೀರಿ. ಇದು ಸರಿಯಲ್ಲ, ಇಲ್ಲಿನ ತಾಲ್ಲೂಕು ಬೋರ್ಡಿನವರೇ ರೆಸಲ್ಯೂಷನ್ ಮಾಡಿ ಸರಕಾರಕ್ಕೆ ಕಳುಹಿಸಿದ್ದಾರೆ. ಇದು ನನಗೆ ಚೆನ್ನಾಗಿ ಗೊತ್ತು. ಪಾಳ್ಯ ಹೋಬಳಿಯಲ್ಲಿ ಈಗಲಾದರೂ ಒಂದು ಹೆಲ್ತ್ ಯೂನಿಟ್ನ್ನು ಕೊಡಿಸಿಕೊಡುತ್ತೀರಾ ?

†ಶ್ರೀ ಎಚ್. ಸಿದ್ಧವೀರಪ್ಪ.—ಈಗಿರುವ ಸರಕಾರದ ಆರ್ಡರು ಪ್ರಕಾರ ಪಾಳ್ಯ ಹೋಬಳಿಯಲ್ಲಿ 15 ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇರಬೇಕು. ಇಲ್ಲಿ ಅಷ್ಟು ಜನಸಂಖ್ಯೆ ಇಲ್ಲದಿರುವುದರಿಂದ ಇಲ್ಲಿಗೆ ಜಿ.ಓ. ಪ್ರಕಾರ ಹೆಲ್ತ್ ಯೂನಿಟ್ನ್ನು ಕೊಡುವುದಕ್ಕಾಗುವುದಿಲ್ಲ. ಇದರ ಪಕ್ಕದಲ್ಲಿ ಆಲೂರು ಇದೆ. ಇಲ್ಲಿ ಒಂದು ಹೆಲ್ತ್ ಯೂನಿಟ್ಟಿದೆ. ಮಾನ್ಯ ಸದಸ್ಯರು ಇದನ್ನು ಸಮಿ ಮಲೆನಾಡು ಏರಿಯಾ ಎಂದು ಹೇಳುತ್ತಾರೆ. ಇಲ್ಲಿನ ಜನರು ಇದನ್ನು ಮಾಡಿಕೊಡಲು ಸಹಾಯ ಮಾಡಲು ಮುಂದೆ ಬಂದರೆ ಆಗ ಆ ಸಲಹೆಯನ್ನು ವಿಚಾರ ಮಾಡೋಣ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಒಂದು ಹೆಲ್ತ್ ಯೂನಿಟ್ನ್ನು ಆರಂಭವಾಗ ಬೇಕಾದರೆ ಅದಕ್ಕೆ ಇರಬೇಕಾದ ಅರ್ಹತೆಗಳೇನು ?

ಶ್ರೀ ಎಚ್. ಸಿದ್ಧವೀರಪ್ಪ.—ಅದಕ್ಕೆ ಸರಕಾರದ ಆರ್ಡರಿದೆ. ಸರಕಾರಿ ಆರ್ಡರು ನಂಬರು ಪಿ.ಎಲ್.ಎಂ. 168 ಮಾಸ್ತ್ರ ಪಿ.ಪಿ. 61, ಬೆಂಗಳೂರು ದಿನಾಂಕ ಒಂದನೇ ಮಾರ್ಚಿ 1962 ನೇ ಜಿ.ಓ. ಪ್ರಕಾರ ಹೆಲ್ತ್ ಯೂನಿಟ್ಟುಗಳನ್ನು ಕೊಡಲಾಗುತ್ತದೆ.

ಶ್ರೀ ಕೆ. ಎಂ. ರುದ್ರಪ್ಪ.—ನಮ್ಮ ಪಾಳ್ಯದಲ್ಲಿ 15 ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದೆ. ಇದರಿಂದ ಈಗಲಾದರೂ ಇಲ್ಲಿಗೆ ಒಂದು ಪ್ಯೆಮರಿ ಹೆಲ್ತ್ ಯೂನಿಟ್ನ್ನು ಕೊಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಆಗಲೇ ಅರಿಕೆಮಾಡಿದೆ, 23ನೇ ಬ್ಲಾಕ್‌ನಲ್ಲಿ 15ಸಾವಿರ ಜನಸಂಖ್ಯೆ ಇದೆಯೆಂದು. ಈ ಜನಸಂಖ್ಯೆಯ ವಿಸ್ತೀರ್ಣದಲ್ಲಿ ಈ ಗ್ರಾಮ ಬರುತ್ತದೆ. ಪಕ್ಕದ ಆಲೂರಿನಲ್ಲಿ ಈಗಾಗಲೇ ಒಂದು ಹೆಲ್ತ್ ಸೆಂಟರ್ ಇದೆ. ಈಗಿರತಕ್ಕ ಗವರ್ನ್‌ಮೆಂಟ್ ಆಫ್ ಇಂಡಿಯಾದ ಪ್ಯಾಟರ್ನ್ ಪ್ರಕಾರ ಈಗಿರತಕ್ಕ ಸರ್ಕಾರದ ಹುಕುಂ ಪ್ರಕಾರ ಅಲ್ಲಿ ಹೆಲ್ತ್ ಯೂನಿಟನ್ನು ಮಾಡಲಕ್ಕಾಗುವುದಿಲ್ಲ. ಆದರೂ ವಿಶೇಷ ಸಂದರ್ಭದಲ್ಲಿ ಸ್ಥಳೀಯರು ಮುಂದೆ ಬಂದರೆ ಇದನ್ನು ವಿಚಾರಮಾಡೋಣ.